## ಪದಬಂಧ




ಎಡದಿಂದ ಬಲಕ್ಕೆ:

1. ಅಸತ್ಯಕ್ಕೆ ಮತ ನೀಡುವುದು ಒಪ್ಪುವಂತಹದಲ್ಲ 4
3. ದೋಷರಹಿತವಾಗಿ ಉಳಿದಿದೆಯೇ ಸಮುದ್ರ? 3
5. ದುರುದುರು ನೋಡಿದವರ ಕಣ್ಣಲ್ಲಿ ನೆತ್ತರು 3
6. ಕೂಡಿಡುವ ಹಣದ ಪ್ರಮಾಣಕ್ಕೂ ಉಂಟೇ ನಿಯಂತ್ರಣ? 4
7. ಕೈ ಕೆಲಸಗಳೇ ಅಲ್ಲಿ ಎಲ್ಲವೂ 3
9. ಪ್ರಾರ್ಥನೆಯ ಕೆಲಸಕ್ಕೆ ಅಡ್ಡಿ ಮಾಡುವುದು ಮಹಾ ಪಾಪದ ಕಾರ್ಯ 3
11. ಪತ್ತೇದಾರನಾಗಲು ಸಾಧ್ಯವೇ ಆ ಪೆದ್ದ? 3
13. ಮಗುವನ್ನು ಸುಮ್ಮನಿರಿಸಲು ರಂಜಿಸು, ಸಮಾಧಾನಗೊಳಿಸು 3
15. ಆಪ್ತರನ್ನೆಲ್ಲ ಸೇರಿಸು, ಅಕ್ಕಪಕ್ಕ 4
17. ಕೆಡುಕು ಮಾಡುವವರನ್ನು ನೆನೆದರೇ ಗಡಗಡ 3
18. ಧರ್ಮಾಂಧರನ್ನೆಲ್ಲ ಹೀಗೆ ತುಳಿದು ಸಾಯಿಸುವುದೇ? 3
19. ಜ್ವರದಿಂದ ನರಳಿದ್ದೇ ಆಯಿತು, ಬಿಡುವಿನ ಇಪ್ಪತ್ನಾಲ್ಕೂ ತಾಸು 4

ಮೇಲಿಂದ ಕೆಳಕ್ಕೆ:

1. ಅಧ್ಯಯನಕ್ಕೆಂದು ಮೀಸಲಿಟ್ಟ ಹಣ ಹೆಚ್ಚಾಯಿತು 3
2. ಸದಾ ತಣ್ಣಗಿರುವ ಸ್ವಭಾವದ ಯುವಕ ಆತ 3
3. ಸೆರೆ ಹಿಡಿದ ಶಂಕಿತರ ಸಂಖ್ಯೆ ಒಂದು ನೂರು ಮುಟ್ಟಿದೆ 3
5. ಹೆಸರಾಂತ ಜನರ ಈ ಪಟ್ಟಿ ಸುಪ್ರಸಿದ್ಧರ ಹೊರತಾಗಿದೆ 3
7. ಮೊಸರನ್ನೇ ಸೇವಿಸುವಂತೆ ಮಾಡಿದರೆ ಹೆಚ್ಚು ಕಡಿಮೆ ಇಲ್ಲದಂತಾದೀತೇ? 4
8. ಅನ್ಯಲೋಕಗಳಿಗೆ ಸ್ಥಳಾಂತರಗೊಳ್ಳಲು ಸಿದ್ಧರಿರುವವರ ಸಂಖ್ಯೆ ನೂರು ಸಾವಿರದಷ್ಟಿದೆ 4
9. ಆತನ ಪರಿವಾರವೆಲ್ಲ ಒಟ್ಟಾಗಿ ಬಂದು ವೀಕ್ಷಿಸಿದ್ದುಇದೇ ಸಾಗರ 4
10. ಇಷ್ಟೂ ಕೊತ್ತಂಬರಿ ಸೊಪ್ಪನ್ನು ಚೂರು ಚೂರು ಮಾಡು 4
12. ಪ್ರಥಮ ಸ್ಥಾನಕ್ಕೆ ಅಡ್ಡ ದಾರಿ ಹಿಡಿದರೆ ಬೀಳುವುದು ನಿಶ್ಚಿತ 3
14. ಮಾತಿನ ಮಲ್ಲನೊಡನೆ ಬಹು ಕಾಲಾನಂತರ ಭೇಟಿ 3
15. ಅಂಕುರಾರ್ಪಣೆಯ ವಿಧಾನವನ್ನು ತಿಳಿಸುವ ಮೂಲ ಗ್ರಂಥ ಗೊತ್ತೇ? 3
16. ಒಳ್ಳೆಯ ಮನಸ್ಸಿನವರಿಗಷ್ಟೇ ಕಾಣುವ ಹೂವು 3

### 24–12–2020 ಉತ್ತರಗಳು

ಎಡದಿಂದ ಬಲಕ್ಕೆ:

1. ಸಂಹಾರಕ 3. ನಿರಭ್ರ 4. ವಿಶಾಲ 6. ಮಹೋನ್ನತ 7. ಪ್ರಚಾರಕ 9. ಮಂಗಮೂತಿ 11. ನವನೀತ 13. ಸಡಗರ 15. ಆಡಂಬರ 17. ವರುಣ 18. ಹಸಿರು 19. ತಿಳಿಹಾಸ್ಯ

ಮೇಲಿಂದ ಕೆಳಕ್ಕೆ:

1. ಸಂಭ್ರಮ 2. ಕವಿತ 3. ನಿಖರ 5. ಲವಂಗ 7. ಪ್ರಹಸನ 8. ಕಲಾವಂತ 9. ಮಂದಹಾಸ 10. ತಿರಸ್ಕಾರ 12. ನೀರವ 14. ಡಮರು 15. ಆಣತಿ 16. ರಹಸ್ಯ

ಪ್ರಶ್ನಾಂಕಣ

# ಬಾವಲಿ ನಮಗೆ ಶತ್ರು, ಹೌದೇ?

ಬಾವಲಿ ಇದೀಗ ತುಂಬ ಕುಖ್ಯಾತ. ಅದು ಮನುಷ್ಯರ ಶತ್ರು ಎಂಬ ಭಾವ ಪ್ರಸ್ತುತ ಸಾರ್ವತ್ರಿಕ, ಸರ್ವವ್ಯಾಪಕ. ಏಕೆಂದರೆ, ಇಡೀ ಜಗತ್ತನ್ನೇ ತಲ್ಲಣಗೊಳಿಸಿ ತಳಮಳಕ್ಕೆ ಒಳಪಡಿಸಿರುವ ಕೋವಿಡ್19 ವೈರಾಣುಗಳ ಮೂಲ ಬಾವಲಿಗಳೇ ಆಗಿರುವುದು ಈಗ ಸರ್ವವಿದಿತ. (ಕೋವಿಡ್ 19 ರಂತೆಯೇ ಎಬೋಲಾ, ಸಾರ್ಸ್ ಮತ್ತು ನಿಫಾ ಅಂಟುಜಾಡ್ಯಗಳ ವೈರಾಣುಗಳಿಗೂ ಬಾವಲಿಗಳೇ ಮೂಲ ಆಶ್ರಯತಾಣಗಳು) ಹಾಗಾಗಿಯೇ, ಧರೆಯ ಕೆಲ ರಾಷ್ಟ್ರಗಳು ಬಾವಲಿಗಳನ್ನು ಸಾರಾಸಗಟು ಧ್ವಂಸ ಮಾಡುವ ಕಾರ್ಯವನ್ನು ಕೈಗೊಂಡಿವೆ ಕೂಡ.

ಆದರೆ, ವಾಸ್ತವವಾಗಿ ಬಾವಲಿಗಳ ಬಗೆಗೆ ಇಂಥ ದ್ವೇಷ ಸರಿಯಲ್ಲ. ಬಾವಲಿ ಇಡೀ ಸಸ್ತನಿವರ್ಗದಲ್ಲಿ ಹಾರಾಟ ಸಾಮರ್ಥ್ಯ ಇರುವ ಏಕಮಾತ್ರ ಪ್ರಾಣಿಯಾಗಿದೆ. ಹಾರಾಡುವ ಶ್ರಮದಾಯಕ ಕ್ರಿಯೆಯಿಂದ ಒಡಮೂಡುವ ಒತ್ತಡವನ್ನು ಸಹಿಸಲೆಂದು ಬಾವಲಿಗಳಿಗೆ ಸಸ್ತನಿ ವರ್ಗದ ಬೇರಾವ ಪ್ರಾಣಿಗೂ ಲಭ್ಯವಿಲ್ಲದಷ್ಟು ಬಲಿಷ್ಠ ರೋಗ ನಿರೋಧಕ ಶಕ್ತಿ ಪ್ರಾಪ್ತವಾಗಿದೆ. ಹಾಗಾದ್ದರಿಂದಲೇ ಹಲವಾರು ಘೋರ ವೈರಾಣುಗಳಿಗೆ ಆಶ್ರಯ ನೀಡಿದರೂ ಬಾವಲಿಗಳು ರೋಗಮುಕ್ತವಾಗಿವೆ. ಆದರೆ, ಅವು ಸೊಳ್ಳೆಗಳಂತೆ ಪಿಡುಗುಕಾರಕಗಳಲ್ಲ; ಅವು ಮನುಷ್ಯರನ್ನು ಹುಡುಕಿ ಬಂದು ಯಾವ ಜಾಡ್ಯವನ್ನೂ ಹರಡುವುದಿಲ್ಲ. ಬಾವಲಿಗಳು ನಮ್ಮೊಡನೆ, ನಮ್ಮ ನಡುವೆ ಇರಲು ಬಯಸುವುದೂ ಇಲ್ಲ; ಅವಕ್ಕೆ ನಮ್ಮಿಂದ ಯಾವ ಪ್ರಯೋಜನವೂ ಇಲ್ಲ. ತದ್ವಿರುದ್ಧವಾಗಿ, ಮನುಷ್ಯರೇ ಅಡವಿ, ಗುಹೆಗಳನ್ನು ಆಕ್ರಮಿಸಿ, ಅವಕ್ಕೆ ನೈಸರ್ಗಿಕ ನೆಲೆ ಇಲ್ಲದಂತೆ ಮಾಡಿ ಅವು ಕಾಡಿನಿಂದ ನಾಡಿಗೆ ಬರುವಂತೆ (ಚಿತ್ರ4) ಮಾಡುತ್ತಿದ್ದಾರೆ. ಬಾವಲಿಗಳನ್ನೂ, ಅಡವಿಗಳಲ್ಲಿ ಬಾವಲಿಗಳ ಸಂಪರ್ಕಕ್ಕೆ ಬಂದ ಇತರ ವನ್ಯಜೀವಿಗಳನ್ನೂ ಬೇಟೆಯಾಡಿ ಅವನ್ನು, ಎಂದರೆ ವನ್ಯಮಾಂಸವನ್ನು, ಭಕ್ಷಿಸುವ ವಿಕೃತ ಜನರಿದ್ದಾರೆ. ಅಂತಹರ ಮೂಲಕ ಬಾವಲಿಗಳಲ್ಲಿ ಕಿಕ್ಕಿರಿದ ವೈರಸ್‌ಗಳು ಎಲ್ಲೆಡೆ ಹರಡುತ್ತವೆ. ಸ್ಪಷ್ಟವಾಗಿಯೇ ಇವೆಲ್ಲ ಅಕೃತ್ಯಗಳಿಗೆ ಬಾವಲಿಗಳು ಹೊಣೆ ಅಲ್ಲ ಹೌದಲ್ಲ?




ವಾಸ್ತವವಾಗಿ ಬಾವಲಿಗಳು ನಮ್ಮ ಶತ್ರುಗಳಲ್ಲ. ತದ್ವಿರುದ್ಧವಾಗಿ ಅವು ರೈತ ಮಿತ್ರ, ಮಾನವ ಮಿತ್ರ ಜೀವಿಗಳಾಗಿವೆ. ನಮಗೂ, ಇತರ ಪ್ರಾಣಿಗಳಿಗೂ, ಸಸ್ಯಗಳಿಗೂ, ಕೃಷಿ ಬೆಳೆಗಳಿಗೂ ಪಿಡುಗುಕಾರಕಗಳಾದ ಸಾವಿರಾರು ಬಗೆಯ ಅಪಾರ ಸಂಖ್ಯೆಯ ಕೀಟಗಳನ್ನು, ಹುಳು ಹುಪ್ಪಟೆಗಳನ್ನು (ಚಿತ್ರ 1, 3) ಬಾವಲಿಗಳು ಬೇಟೆಯಾಡಿ ಭಕ್ಷಿಸುತ್ತವೆ; ಅವುಗಳ ಸಂಖ್ಯೆಯನ್ನು ನಿಯಂತ್ರಿಸುತ್ತವೆ. ಬಾವಲಿಗಳು ಸುಮಾರು ಮುನ್ನೂರು ವಿಧದ ಕೃಷಿ ಸಸ್ಯಗಳ, ಹಣ್ಣಿನ ವೃಕ್ಷಗಳ ಪರಾಗ ಸ್ಪರ್ಶ ಮಾಡುತ್ತವೆ (ಚಿತ್ರ2). ಹೀಗೆಲ್ಲ ಬಾವಲಿಗಳಿಂದ ಜಗದಾದ್ಯಂತ ಪ್ರತಿವರ್ಷವೂ ಒದಗುತ್ತಿರುವ ಲಾಭ ಸಾವಿರಾರು ಶತಕೋಟಿ ರೂಪಾಯಿಗಳಾಗುವಷ್ಟಿದೆ! ಆದ್ದರಿಂದಲೇ, ಬಾವಲಿಗಳು ನಮಗೆ ಶತ್ರುಗಳಲ್ಲವೇ ಅಲ್ಲ.

■ ಎನ್. ವಾಸುದೇವ್